# ಸಮಾಂತರ ಶ್ರೇಢಿಗಳು

1. ಇವುಗಳಲ್ಲಿ ಸಮಾಂತರ ಶ್ರೇಢಿ ಯಾವುದು ?

a) 1 , 3 , 9 , 27 b) $1, \frac{1}{2}, \frac{1}{3}, \frac{1}{4}$ c) 3 , 6 , 9 , 12 d) 1 , 4 , 6 , 9

2. ರಾಮು 1ನೇ ಚೌಕದಲ್ಲಿ 1 ಬಿಂದು, 2 ನೇ ಚೌಕದಲ್ಲಿ 2 ಬಿಂದು, 3 ನೇ ಚೌಕದಲ್ಲಿ 3 ಬಿಂದು, ಹೀಗೆ ಗುರುತಿಸುತ್ತಾ ಹೋಗುತ್ತಾನೆ. ಹಾಗಾದರೆ ಒಟ್ಟು 55 ಬಿಂದುಗಳನ್ನು ಗುರುತಿಸಲು ಬೇಕಾಗುವ ಒಟ್ಟು ಚೌಕಗಳ ಸಂಖ್ಯೆ ?

a) 55 b) 11 c) 9 d) 10

3. ಸಮಾಂತರ ಶ್ರೇಢಿಯ $n$ ನೇ ಪದ ಕಂಡುಹಿಡಿಯುವ ಸೂತ್ರ

a) $a_n = a+n-d$ b) $a_n = a+(n-1)d$ c) $a_n = a\,(n-1)d$ d) $a_n = a+ n-1\,d$

4. ಒಂದು ಸಮಾಂತರ ಶ್ರೇಢಿಯ ಮೊದಲ ಪದ 3 ಮತ್ತು ಸಾಮಾನ್ಯ ವ್ಯತ್ಯಾಸ 5 ಆದಾಗ $n$ ನೇ ಪದ

a) $n-2$ b) $5n-2$ c) $5n+8$ d) $3n$

5. ಕೆಳಗಿನ ಯಾವುದು ನಿಜವಾದ ಗಣಿತ ಸಂಬಂಧವಾಗಿದೆ?

a) $S_n + a_n = S_{n-1}$ b) $S_n - S_{n+1} = a_n$ c) $S_n - S_{n-1} = a_n$ d) $S_n + a_n = S_{n+1}$

6. ಒಂದು $\Delta$ದ ಕೋನಗಳು ಸಮಾಂತರ ಶ್ರೇಢಿಯಲ್ಲಿದ್ದು , ಚಿಕ್ಕ ಕೋನ $40^0$ ಆದರೆ ಉಳಿದೆರಡು ಕೋನಗಳು . . .

a) $60^0$ , $70^0$ b) $55^0$ , $65^0$ c) $50^0$ , $60^0$ d) $60^0$ , $80^0$

7. ಮೊದಲ $n$ ಸ್ವಾಭಾವಿಕ ಸಂಖ್ಯೆಗಳ ಮೊತ್ತ . . . .

a) $\frac{n(n+1)}{3}$ b) $\frac{n(n+1)}{2}$ c) $\frac{n(n-1)}{2}$ d) $\frac{n(n+1)}{4}$

8. ಸಮಾಂತರ ಶ್ರೇಢಿಯಲ್ಲಿ $a_n - a_{n-1} = ?$

a) $a_2$ b) $a_{n-2}$ c) $d$ d) $a$

9. ಎರಡು ಪದಗಳ ಸಮಾಂತರ ಮಾಧ್ಯ $( a + d )$ ಆಗಿದ್ದು ಒಂದು ಪದವು $( a + 5d )$ ಆದರೆ, ಇನ್ನೊಂದು ಪದ

a) $( a + 5d )$ b) $( a - 5d )$ c) $( a + 3d )$ d) $( a - 3d )$

10. ಸಮಾಂತರ ಮಾಧ್ಯ ಲೆಕ್ಕಿಸುವ ಸೂತ್ರ . . . .

a) $\frac{2ab}{a+b}$ b) $\frac{a+b}{2}$ c) $\frac{a+b}{2ab}$ d) $\sqrt{ab}$

11. ಒಂದು ಸಮಾಂತರ ಶ್ರೇಢಿಯಲ್ಲಿ $a_{n+5} = 35$ ಮತ್ತು $a_{n+1} = 23$ ಆದರೆ, ಸಾಮಾನ್ಯ ವ್ಯತ್ಯಾಸ

a) 3 b) 2 c) $3n$ d) $2n$

12. $1 + 2 + 3 + 4 \ldots\ldots (n-1)$ ಶ್ರೇಣಿಯ ಮೊತ್ತ

a) $\frac{n(n+1)}{2}$ b) $\frac{(n+1)}{2}$ c) $\frac{(n-1)}{2}$ d) $\frac{n(n-1)}{2}$

13. ಸಮಾಂತರ ಶ್ರೇಢಿಯ ಮೊದಲಪದ $a$ & $n$ ನೇ ಪದ $a_n$ ಆದರೆ ಸಾಮಾನ್ಯ ವ್ಯತ್ಯಾಸ $d = ?$

a) $\frac{a_n - a}{n-1}$ b) $\frac{a_n + a}{n-1}$ c) $\frac{a_n - a}{n+1}$ d) $\frac{a_n + a}{n+1}$

14. ಸಮಾಂತರ ಶ್ರೇಢಿಯಲ್ಲಿರುವ ಮೂರು ಸಂಖ್ಯೆಗಳ ಮೊತ್ತ 15 ಮತ್ತು ಗುಣಲಬ್ಧ 80 ಆದರೆ ಆ ಸಂಖ್ಯೆಗಳು . . .

a) 3 , 5 , 8 b) 5 , 7 , 8 c) 3 , 5 , 7 d) 2 , 5 , 8

15. $1 + 2 + 3 + 4 \ldots\ldots = 210$ ಆದರೆ $n = ?$

a) 15 b) 30 c) 20 d) 28

16. ಒಂದು $\Delta$ದ ಕೋನಗಳು ಸಮಾಂತರ ಶ್ರೇಢಿಯಲ್ಲಿದ್ದು , ಚಿಕ್ಕ ಕೋನ $30^0$ ಆದರೆ ಅದು . . . . ತ್ರಿಭುಜ.

a) ಸಮಬಾಹು b) ಸಮದ್ವಿಬಾಹು c) ವಿಶಾಲಕೋನ d) ಲಂಬಕೋನ

17. $a_1 , a_2 , a_3$ . . ಸಮಾಂತರ ಶ್ರೇಢಿಯಲ್ಲಿದ್ದರೆ, $a_n = ?$

a) $a_n - d$ b) $a_{n-1} + d$ c) $a_n - a_{n-1}$ d) $a_{n+1} + d$

18. ಮೊದಲ $n$ ಬೆಸ ಸಂಖ್ಯೆಗಳ ಮೊತ್ತ . . .

a) $2n^2$ b) $n(n+1)$ c) $n^2$ d) $n(n-1)$

19. ಮೊದಲ $n$ ಸಮಸಂಖ್ಯೆಗಳ ಮೊತ್ತ = ?

a) $n^2$ b) $n(n+1)$ c) $2n(n+1)$ d) $n(n-1)$

20. ಸಮಾಂತರ ಶ್ರೇಣಿಯ $S_2 = 8$ & $S_1 = 5$ ಆದರೆ, $d = ?$

a) $-2$ b) 2 c) 12 d) 5

21. ಮೊದಲ ಪದ a & n ನೇ ಪದ $\ell$ ಆಗಿರುವ ಸಮಾಂತರ ಶ್ರೇಣಿಯ ಮೊದಲ n ಪದಗಳ ಮೊತ್ತ . . . .

a) $\frac{n}{2}(2a - \ell)$ b) $\frac{n}{2}(2a + \ell)$ c) $\frac{n}{2}(a + \ell)$ d) $\frac{n}{2}(a - \ell)$

22. ಸಮಾಂತರ ಶ್ರೇಣಿಯ ಮೊದಲ $n$ ಸಂಖ್ಯೆಗಳ ಮೊತ್ತ . .

a) $\frac{n}{2}[2a + (n+1)d]$ b) $\frac{n}{2}[2a + (n-1)d]$ c) $\frac{n}{2}[a + (n-1)d]$ d) $a+(n-1)d$

23. ಒಂದು ಸಮಾಂತರ ಶ್ರೇಢಿಯಲ್ಲಿ ಈ ಕೆಳಗಿನವುಗಳಲ್ಲಿ ಸರಿಯಾದ ಸಂಬಂಧ

a) $a_{n-5} = a_{n-4} + d$ b) $a_{n-5} = a_{n-6} + d$ c) $a_{n-5} = a_n + d$ d) $a_{n-5} = a_n - d$

24. 3, 7, 11, 15 . . . . ಇದರ $n$ ನೇ ಪದ

a) $4n-1$ b) $4n + 1$ c) $4n + 3$ d) $3n + 4$

25. $a_n = 4n + 1$ ಆದಾಗ , $a_4 = ?$

a) 5 b) 9 c) 13 d) 17

**ಇತರ ಒಂದು ಅಂಕದ ಪ್ರಶ್ನೆಗಳು :**

26. ಒಂದು ಸಮಾಂತರ ಶ್ರೇಣಿಯಲ್ಲಿ $S_5 = 35$ ಮತ್ತು $S_4 = 22$ ಆದರೆ , 5 ನೇ ಪದ ಕಂಡುಹಿಡಿಯಿರಿ.
27. ಒಂದು ಶ್ರೇಢಿಯಲ್ಲಿ $a_n = n^2 - 1$ ಆಗಿದ್ದು , $a_n = 35$ ಆದರೆ $n$ ಬೆಲೆ ಕಂಡುಹಿಡಿಯಿರಿ.
28. 4 , 7 , 10 , 13 , . . . . . ಶ್ರೇಢಿಯ 9ನೇ ಪದ . . . .
29. ಒಂದು ಶ್ರೇಢಿಯಲ್ಲಿ $a_n = 2n - 1$ ಆದರೆ , ಶ್ರೇಢಿಯ ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ.
30. ನನ್ನ ಮಗನ ವಯಸ್ಸು , ನನ್ನ ವಯಸ್ಸು & ನನ್ನ ತಂದೆಯ ವಯಸ್ಸು ಇವುಗಳೆಲ್ಲಾ ಸಮಾಂತರ ಶ್ರೇಢಿಯಲ್ಲಿವೆ. ನನ್ನ ವಯಸ್ಸು 40 ಹಾಗೂ ನನ್ನ ಮಗನ ವಯಸ್ಸು 10 ವರ್ಷ ಆದರೆ ನನ್ನ ತಂದೆಯ ವಯಸ್ಸೆಷ್ಟು ?
31. ಒಂದು ಸಮಾಂತರ ಶ್ರೇಢಿಯಲ್ಲಿ $a_3 = 7$ & $d = 6$ ಆದರೆ, $a$ ಯ ಬೆಲೆ . . . .
32. ಮೊದಲ 25 ಸಮಸಂಖ್ಯೆಗಳ ಮೊತ್ತ ಕಂಡುಹಿಡಿಯಿರಿ.
33. $a_n = 3n + 1$ ಆದಾಗ , $S_2$ ಬೆಲೆ ಕಂಡುಹಿಡಿಯಿರಿ.
34. ಸಮಾಂತರ ಶ್ರೇಢಿಯ 18 ನೇ ಪದ 37, ಸಾಮಾನ್ಯ ವ್ಯತ್ಯಾಸ 2 ಆದರೆ , 11 ನೇ ಪದ . . . .
35. ಮೊತ್ತ 8100 ಆಗಲು ಕೂಡಿಸಬೇಕಾದ ಕ್ರಮಾಗತ ಬೆಸ ಸಂಖ್ಯೆಗಳ ಸಂಖ್ಯೆ ಎಷ್ಟು ?
36. 9 , –4 , –17 . . . . ಸಮಾಂತರ ಶ್ರೇಣಿಯಲ್ಲಿ $d = ?$
37. 1 , –1 , –3, –5 . . . . ಸಮಾಂತರ ಶ್ರೇಢಿಯ ಮೊದಲ ಪದ ಮತ್ತು ಸಾಮಾನ್ಯ ವ್ಯತ್ಯಾಸ ತಿಳಿಸಿ.
38. ಸಮಾಂತರ ಶ್ರೇಢಿಯ ಆದರ್ಶ ರೂಪ ಬರೆಯಿರಿ.
39. ಮೊದಲ ಪದ –5 ಮತ್ತು ಸಾಮಾನ್ಯ ವ್ಯತ್ಯಾಸ +3 ಇರುವ ಸಮಾಂತರ ಶ್ರೇಢಿ ಬರೆಯಿರಿ.
40. ಒಂದು ಸಮಾಂತರ ಶ್ರೇಢಿಯಲ್ಲಿ $an = 3n - 1$ ಆದರೆ, ಸಾಮಾನ್ಯ ವ್ಯತ್ಯಾಸ ತಿಳಿಸಿ.
41. ಸಮಾಂತರ ಶ್ರೇಢಿಯ $a_4 = 8$ & $a = 2$ ಆದರೆ, $d = ?$
42. $2x + 1, 4x , 13 - x$ ಸಮಾಂತರ ಶ್ರೇಢಿಯಲ್ಲಿದ್ದರೆ $x = ?$
43. 2 ಮತ್ತು 8 ಗಳ ಸಮಾಂತರ ಮಾಧ್ಯ . . . .
44. ಒಂದು ಶ್ರೇಢಿಯ ಮೊದಲ 8 ಪದಗಳ ಮೊತ್ತ 24 ಮತ್ತು ಮೊದಲ 7 ಪದಗಳ ಮೊತ್ತ 18 ಆದರೆ, ಆ ಶ್ರೇಢಿಯ 8 ನೇ ಪದ ಯಾವುದು ?
45. ಸ್ವಾಭಾವಿಕ ಸಂಖ್ಯೆಗಳ ಶ್ರೇಢಿಯಲ್ಲಿ $d = ?$
46. ಒಂದು ಸಮಾಂತರ ಶ್ರೇಢಿಯ ಮೊದಲ 99 ಪದಗಳ ಮೊತ್ತ 99 ಆದರೆ, 50 ನೇ ಪದ ಯಾವುದು ?
47. 1 + 3 + 5 + . . . . . ಶ್ರೇಣಿಯ 70 ಪದಗಳ ಮೊತ್ತ . .
48. ಮೊದಲ ನೂರು ಸ್ವಾಭಾವಿಕ ಸಂಖ್ಯೆಗಳ ಮೊತ್ತ ತಿಳಿಸಿ.
49. $a_n = 2n^2 + 1$ ಆದಾಗ , $a_3$ ಬೆಲೆ ಕಂಡುಹಿಡಿಯಿರಿ.
50. $a_n = 3n - 1$ ಆದಾಗ , ಮೊದಲ ಎರಡು ಪದಗಳನ್ನು ಕಂಡುಹಿಡಿಯಿರಿ.

**ಎರಡು ಅಂಕದ ಪ್ರಶ್ನೆಗಳು :**

51. ಒಂದು ಕಟ್ಟಡದ 15 ಮೆಟ್ಟಿಲುಗಳನ್ನು ಗೀತ ಮೊದಲ ನಿಮಿಷದಲ್ಲಿ ಹತ್ತಿ , ನಂತರ ಪ್ರತಿ ನಿಮಿಷದಲ್ಲಿ ಹಿಂದಿನ ನಿಮಿಷದಲ್ಲಿ ಹತ್ತಿದ್ದಕ್ಕಿಂತ 3 ಮೆಟ್ಟಿಲು ಕಡಿಮೆ ಹತ್ತುತ್ತಾಳೆ. ಅವಳು 5 ನಿಮಿಷದಲ್ಲಿ ಕಟ್ಟಡ ಹತ್ತಿದರೆ, ಗೀತ ಹತ್ತಿದ ಒಟ್ಟು ಮೆಟ್ಟಿಲುಗಳ ಸಂಖ್ಯೆ ಕಂಡುಹಿಡಿಯಿರಿ.
52. 2 + 4 + 6 + . . . . . = 420 ಆದರೆ ಪದಗಳ ಸಂಖ್ಯೆ ?
53. ಒಂದು ಸಮಾಂತರ ಶ್ರೇಢಿಯ ಮೊದಲ ಪದ 4 ಮತ್ತು ಕೊನೆಯ ಪದ 64 ಆದರೆ, ಎಷ್ಟು ಪದಗಳ ಮೊತ್ತವು 680 ಆಗುತ್ತದೆ ?
54. ಒಬ್ಬನು 1ನೇ ಪೆಟ್ಟಿಗೆಯಲ್ಲಿ 3 ಗೋಲಿಗಳನ್ನು , 2 ನೇ ಪೆಟ್ಟಿಗೆಯಲ್ಲಿ 5 ಗೋಲಿಗಳನ್ನು , 3 ನೇ ಪೆಟ್ಟಿಗೆಯಲ್ಲಿ 7 ಗೋಲಿಗಳನ್ನು ಹೀಗೆ ಹಾಕುತ್ತಾಹೋದರೆ 16 ನೇ ಪೆಟ್ಟಿಗೆಯಲ್ಲಿ ಹಾಕುವ ಗೋಲಿಗಳ ಸಂಖ್ಯೆ ತಿಳಿಸಿ.
55. ಮೊದಲ $n$ ಸ್ವಾಭಾವಿಕ ಸಂಖ್ಯೆಗಳ ಮೊತ್ತ = 120 ಆದರೆ, $n$ ನ ಬೆಲೆ ಕಂಡುಹಿಡಿಯಿರಿ.
56. 5 , 11 , 17 , 23 . . . . ಸಮಾಂತರ ಶ್ರೇಢಿಯಲ್ಲಿ 301 ಒಂದು ಪದವಾಗುತ್ತದೆಯೇ ಎಂದು ಪರೀಕ್ಷಿಸಿ.
57. ಒಂದು ಸಮಾಂತರ ಶ್ರೇಢಿಯ ಮೊದಲ $n$ ಪದಗಳ ಮೊತ್ತ $S_n = \frac{n}{2}[2a + (n-1)d]$ ಎಂದು ಸಾಧಿಸಿ.
58. ಮೊದಲ $n$ ಧನ ಬೆಸ ಸಂಖ್ಯೆಗಳ ಮೊತ್ತವು $S_n = n^2$ ಎಂದು ಸಾಧಿಸಿ.
59. ಒಂದು ಸಮಾಂತರ ಶ್ರೇಢಿಯಲ್ಲಿ $a_{10} = 20$ , $a_{20} = 10$ ಆದರೆ, ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ.
60. 3 + 6 + 9 + . . . . . ಶ್ರೇಣಿಯ ಮೊದಲ 50 ಪದಗಳ ಮೊತ್ತ ಕಂಡುಹಿಡಿಯಿರಿ.
61. 1 + 3 + 6 + . . . . . ಶ್ರೇಣಿಯ ಮೊದಲ 70 ಪದಗಳ ಮೊತ್ತ ಲೆಕ್ಕಿಸಿ.
62. ಸಾಮಾನ್ಯ ವ್ಯತ್ಯಾಸ 2 ಇರುವ ಸಮಾಂತರ ಶ್ರೇಢಿಯಲ್ಲಿ 15 ನೇ ಪದ 32 ಆದರೆ, ಮೊದಲ ಪದ ಕಂಡುಹಿಡಿಯಿರಿ.
63. ಒಂದು ಸಮಾಂತರ ಶ್ರೇಢಿಯ ಮೊದಲ ಪದ 2 ಮತ್ತು ಸಾಮಾನ್ಯ ವ್ಯತ್ಯಾಸ 3 ಆದರೆ, 20ನೇ ಪದ ಲೆಕ್ಕಿಸಿ.
64. ಒಂದು ಸಮಾಂತರ ಶ್ರೇಢಿಯ ಮೊದಲ ಪದ & ಸಾಮಾನ್ಯ ವ್ಯತ್ಯಾಸಗಳು ಕ್ರಮವಾಗಿ 1 & 4 ಆದರೆ, ಎಷ್ಟನೇ ಪದವು 45 ಆಗುತ್ತದೆ ?
65. ಒಂದು ಸಮಾಂತರ ಶ್ರೇಢಿಯ ಮೊದಲ ಹಾಗೂ 129 ನೇ ಪದಗಳು ಕ್ರಮವಾಗಿ 2 ಮತ್ತು 258 ಆದರೆ, 65 ನೇ ಪದ ಕಂಡುಹಿಡಿಯಿರಿ.
66. 20 ಪದಗಳಿರುವ ಒಂದು ಸಮಾಂತರ ಶ್ರೇಣಿಯ ಮೊದಲ ಪದವು 5 ಮತ್ತು ಕೊನೆಯ ಪದವು 62 ಆದರೆ, ಶ್ರೇಣಿಯ ಮೊತ್ತವನ್ನು ಕಂಡುಹಿಡಿಯಿರಿ.

66. 25 ಪದಗಳಿರುವ ಒಂದು ಸಮಾಂತರ ಶ್ರೇಣಿಯ ಮಧ್ಯದ ಪದವು 20 ಆದರೆ, ಶ್ರೇಣಿಯ ಮೊತ್ತ ಕಂಡುಹಿಡಿಯಿರಿ.

67. ಒಂದು ಚೌಕವನ್ನು 16 ಚಿಕ್ಕ ಚದರಗಳಾಗಿ ಭಾಗಮಾಡಿದೆ. ಒಬ್ಬ ಹುಡುಗನು 1ನೇ ಚೌಕದಲ್ಲಿ 2 ಗೋಲಿಗಳನ್ನು & ಅದರ ಮುಂದಿನ ಚೌಕದಲ್ಲಿ 4 ಗೋಲಿಗಳನ್ನು ಇಡುತ್ತಾನೆ. ಹೀಗೆ ಪ್ರತಿ ಸಲವೂ 2 ಗೋಲಿಗಳನ್ನು ಹೆಚ್ಚಿಸುತ್ತಾ ಬರುತ್ತಾನೆ. ಎಲ್ಲಾ ಚೌಕಗಳನ್ನು ತುಂಬಲು ಒಟ್ಟು ಎಷ್ಟು ಗೋಲಿಗಳು ಬೇಕು ?

68. ಒಂದು ಸಮಾಂತರ ಶ್ರೇಣಿಯ 15 ಪದಗಳ ಮೊತ್ತ 180 ಆದರೆ 8 ನೇ ಪದ ಕಂಡುಹಿಡಿಯಿರಿ.

69. ಒಂದು ಸಮಾಂತರ ಶ್ರೇಢಿಯ 4 ನೇ ಮತ್ತು 8 ನೇ ಪದಗಳ ಅನುಪಾತ 1:2 ಮತ್ತು 10 ನೇ ಪದವು 30 ಆದಾಗ ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ.

70. ಒಂದು ಮೇಜಿನ ಮೇಲೆ 10 ಡಬ್ಬಗಳಿವೆ. ರಾಮು ಮೊದಲನೇ ಡಬ್ಬದಲ್ಲಿ 4 ಗೋಲಿಗಳು, ಎರಡನೇ ಡಬ್ಬದಲ್ಲಿ 7 ಗೋಲಿಗಳು, ಮೂರನೇ ಡಬ್ಬದಲ್ಲಿ 10 ಗೋಲಿಗಳು ಹೀಗೆ ಗೋಲಿಗಳನ್ನು ಹೆಚ್ಚಿಸುತ್ತಾ ಹೋದರೆ, ಎಲ್ಲಾ ಡಬ್ಬಗಳಲ್ಲಿ ಹಾಕಿದ ಒಟ್ಟು ಗೋಲಿಗಳ ಸಂಖ್ಯೆ ಎಷ್ಟು?

71. ಒಬ್ಬನು ಆರಂಭಿಕ ತಿಂಗಳ ಠೇವಣಿಯಾಗಿ ರೂ. 1000 ಇಡುತ್ತಾನೆ. ನಂತರ ಪ್ರತಿ ತಿಂಗಳು ರೂ. 60 ರಂತೆ ಠೇವಣಿಯನ್ನು ಹೆಚ್ಚಿಸುತ್ತಾನೆ. ಹಾಗಾದರೆ 2 ವರ್ಷದ ಅಂತ್ಯದಲ್ಲಿ ಅವನು ಪಾವತಿಸಿದ ಒಟ್ಟು ಹಣವೆಷ್ಟು?

72. $1 + 4 + 7 + \ldots\ldots = 590$ ಆದರೆ ಪದಗಳ ಸಂಖ್ಯೆ ?

71. 7 ರಿಂದ ಭಾಗವಾಗುವ 50 ಕ್ಕಿಂತ ಕಡಿಮೆ ಇರುವ ಎಲ್ಲಾ ಸ್ವಾಭಾವಿಕ ಸಂಖ್ಯೆಗಳ ಮೊತ್ತ ಲೆಕ್ಕಿಸಿ.

72. 2 ರಿಂದ 50 ರವರೆಗಿನ ಎಲ್ಲಾ ಸ್ವಾಭಾವಿಕ ಸಂಖ್ಯೆಗಳ ಮೊತ್ತ ಲೆಕ್ಕಿಸಿ.

**ಮೂರು ಅಥವಾ ನಾಲ್ಕು ಅಂಕದ ಪ್ರಶ್ನೆಗಳು :**

73. 1 ರಿಂದ 100 ರ ವರೆಗಿನ ಬೆಸ ಸ್ವಾಭಾವಿಕ ಸಂಖ್ಯೆಗಳ ಮೊತ್ತ ಕಂಡುಹಿಡಿಯಿರಿ.

74. ಒಂದು ಸಮಾಂತರ ಶ್ರೇಢಿಯ 4 ನೇ & 7 ನೇ ಪದಗಳು ಕ್ರಮವಾಗಿ 17 ಮತ್ತು 23 ಆದರೆ, $a_{15}$ ಕಂಡುಹಿಡಿಯಿರಿ.

75. $2 + 5 + 8 + \ldots\ldots$ ಸಮಾಂತರ ಶ್ರೇಣಿಯ 10ನೇ ಪದ ಮತ್ತು ಮೊದಲ 10 ಪದಗಳವರೆಗಿನ ಮೊತ್ತ ಲೆಕ್ಕಿಸಿ.

76. 3 ರಿಂದ ಭಾಗವಾಗುವ 101 ರಿಂದ 200 ರವರೆಗಿನ ಎಲ್ಲಾ ಸ್ವಾಭಾವಿಕ ಸಂಖ್ಯೆಗಳ ಮೊತ್ತ ಲೆಕ್ಕಿಸಿ.

77. ಮೂರು ಸಂಖ್ಯೆಗಳು 2 : 5 : 7 ರ ಪ್ರಮಾಣದಲ್ಲಿವೆ. 2ನೇ ಸಂಖ್ಯೆಯಿಂದ 7ನ್ನು ಕಳೆದಾಗ ಉಂಟಾಗುವ ಸಂಖ್ಯೆಗಳು ಸಮಾಂತರ ಶ್ರೇಢಿಯಲ್ಲಿರುತ್ತವೆ. ಹಾಗಾದರೆ ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

78. ಒಂದು ಚತುರ್ಭುಜದ ಕೋನಗಳು ಸಮಾಂತರ ಶ್ರೇಢಿಯಲ್ಲಿದ್ದು , ಅತ್ಯಂತ ಚಿಕ್ಕ ಕೋನ $15^0$ ಆದರೆ ಉಳಿದ ಕೋನಗಳನ್ನು ಕಂಡುಹಿಡಿಯಿರಿ.

79. 0 , 4 , 8 , 12 . . . . ಸಮಾಂತರ ಶ್ರೇಢಿಯ $n$ನೇ ಪದ ಮತ್ತು 25 ನೇ ಪದ ಕಂಡುಹಿಡಿಯಿರಿ.

80. ಮೂರು ಸಂಖ್ಯೆಗಳು ಸಮಾಂತರ ಶ್ರೇಢಿಯಲ್ಲಿವೆ. ಅವುಗಳ ಮೊತ್ತ 24 ಮತ್ತು ಅವುಗಳ ಗುಣಲಬ್ಧ 440 ಆದರೆ ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

81. ಒಂದು ಸಮಾಂತರ ಶ್ರೇಢಿಯಲ್ಲಿ 8ನೇ ಪದವು 13ನೇ ಪದದ ಎರಡರಷ್ಟಿದ್ದರೆ , 2ನೇ ಪದವು 10ನೇ ಪದದ ಎರಡರಷ್ಟಿದೆ ಎಂದು ಸಾಧಿಸಿ.

82. ಒಂದು ಸಮಾಂತರ ಶ್ರೇಢಿಯ ಮೊದಲ ಪದ 4 , ಕೊನೆಯ ಪದ 49 ಮತ್ತು $S_n = 265$ ಆದರೆ ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ.

83. ಒಂದು ಸಮಾಂತರ ಶ್ರೇಢಿಯ 3ನೇ ಪದ 18 & 7ನೇ ಪದ 30 ಆದರೆ, $S_{17}$ ಕಂಡುಹಿಡಿಯಿರಿ.

84. ಒಂದು ಸಮಾಂತರ ಶ್ರೇಢಿಯ 5 ನೇ ಮತ್ತು 10 ನೇ ಪದಗಳ ಅನುಪಾತ 1:2 ಮತ್ತು 12 ನೇ ಪದವು 36 ಆದಾಗ ಆ ಶ್ರೇಢಿಯನ್ನು ಬರೆಯಿರಿ.

85. ಒಂದು ಸಮಾಂತರ ಶ್ರೇಣಿಯ 6 ಪದಗಳ ಮೊತ್ತ 345. ಮೊದಲ ಮತ್ತು ಕೊನೆಯ ಪದಗಳ ವ್ಯತ್ಯಾಸ 55 ಆದರೆ ಆ ಶ್ರೇಢಿಯನ್ನು ಬರೆಯಿರಿ.

86. ಒಂದು ಸಮಾಂತರ ಶ್ರೇಢಿಯಲ್ಲಿ 7 ನೇ ಪದದ 7 ರಷ್ಟು ಅದರ 11 ನೇ ಪದದ 11 ರಷ್ಟಕ್ಕೆ ಸಮವಿದೆ. ಅದರ 18 ನೇ ಪದವು ಸೊನ್ನೆಗೆ ಸಮ ಎಂದು ಸಾಧಿಸಿ.

87. ಸಮಾಂತರ ಶ್ರೇಢಿಯಲ್ಲಿರುವ ಮೂರು ಸಂಖ್ಯೆಗಳ ಮೊತ್ತ 27 ಮತ್ತು ಅವುಗಳ ವರ್ಗಗಳ ಮೊತ್ತ 293 ಆದರೆ, ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

88. ಒಂದು ರೇಖಾಖಂಡವನ್ನು A.P.ಯಲ್ಲಿ ಇರುವಂತೆ 4 ಭಾಗಗಳಾಗಿ ವಿಭಾಗಿಸಿದೆ. ಇವುಗಳಲ್ಲಿ 3ನೇ ಮತ್ತು 4ನೇ ಭಾಗಗಳ ಮೊತ್ತವು ಮೊದಲೆರಡು ಭಾಗಗಳ ಮೊತ್ತದ 3ರಷ್ಟಿದೆ. 4ನೇ ಭಾಗವು 14cm ಆದರೆ ರೇಖಾಖಂಡದ ಒಟ್ಟು ಉದ್ದವೆಷ್ಟು ?

89. ಒಂದು A.P.ಯ 4ನೇ & 8ನೇ ಪದಗಳ ಮೊತ್ತ 24 ಹಾಗೂ 6ನೇ & 10ನೇ ಪದಗಳ ಮೊತ್ತ 44 ಆದರೆ, ಶ್ರೇಢಿಯ ಮೊದಲ ಮೂರು ಪದಗಳನ್ನು ಕಂಡುಹಿಡಿಯಿರಿ.

90. ಒಂದು A.P.ಯಲ್ಲಿ 5 ಪದಗಳಿದ್ದು ಅವುಗಳ ಮೊತ್ತ 55 ಮತ್ತು 4ನೇ ಪದವು ಮೊದಲೆರಡು ಪದಗಳ ಮೊತ್ತಕ್ಕಿಂತ 5 ಹೆಚ್ಚಾಗಿದೆ. ಆ ಶ್ರೇಢಿಯನ್ನು ಕಂಡುಹಿಡಿಯಿರಿ.

91. ಒಂದು A.P.ಯಲ್ಲಿ 6ನೇ ಪದವು 3ನೇ ಪದದ 2ರಷ್ಟಕ್ಕಿಂತ ಒಂದು ಹೆಚ್ಚಾಗಿದೆ. 4ನೇ & 5ನೇ ಪದಗಳ ಮೊತ್ತವು 2ನೇ ಪದದ ಐದರಷ್ಟಿದೆ. 10ನೇ ಪದವನ್ನು ಕಂಡುಹಿಡಿಯಿರಿ.